

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ‘ಕಾನೂನು ಕತ್ತೆ’ ಎನ್ನುತ್ತಾರೆ ಏಕೆ, ಹೇಗೆ?....

**ಪ್ಯಾ**ರಿಸ್‌ನಲ್ಲಿ ಭಾರತದ ಅನೇಕ ರಾಯಭಾರಿಗಳು ಆಗಿಹೋಗಿದ್ದಾರೆ. ಆದರೆ ಭಾರತದ ಖಾಯಂ ಸಾಂಸ್ಕೃತಿಕ ರಾಯಭಾರಿಯಂತೆ ಅಲ್ಲಿ ನೆಲೆಸಿದ್ದವರೆಂದರೆ ಅಪ್ಪಟ ಕನ್ನಡಿಗ, ಕನ್ನಡಾಭಿಮಾನಿ ಡಾ॥ ಮಹೇಶ್ ಘಟ್ರಡ್ಯಾಲ್ ರವರು. ನಮ್ಮ ದೇಶದ ಪದ್ಮಶ್ರೀ, ಪದ್ಮವಿಭೂಷಣ ಪ್ರಶಸ್ತಿಗಳಂತೆ 2005 ರಲ್ಲಿ ಫ್ರಾನ್ಸ್ ದೇಶದ “Chevalier de la légion d’honneur” ಎಂಬ ಅತ್ಯುನ್ನತ ಗೌರವಕ್ಕೆ ಪಾತ್ರರಾಗಿದ್ದವರು. ಜಗತ್ಪ್ರಸಿದ್ಧ ಐಫೆಲ್ ಟವರ್ ಸಮೀಪದಲ್ಲಿ ಇಂಡೋ-ಫ್ರೆಂಚ್ ಸಾಂಸ್ಕೃತಿಕ ಸಂಸ್ಥೆಯನ್ನು ಸ್ಥಾಪಿಸಿದ ಅವರು ಕಳೆದ ಅರ್ಧಶತಮಾನದಿಂದ ಭಾರತದ ಪ್ರಸಿದ್ಧ ಸಂಗೀತ ಮತ್ತು ಚಿತ್ರ ಕಲಾವಿದರನ್ನು ಆಹ್ವಾನಿಸಿ ಐರೋಪ್ಯದೇಶಗಳಿಗೆ ಪರಿಚಯಿಸಿ ಪ್ರೋತ್ಸಾಹ ನೀಡಿದ ಕಲಾಭಿಮಾನಿಗಳು. ಎರಡು ವರ್ಷಗಳ ಹಿಂದೆಯಷ್ಟೇ ನಿಧನರಾದ ಅವರು ಸ್ವತಂತ್ರಭಾರತದ ರಾಷ್ಟ್ರಧ್ವಜವನ್ನು ಭಾರತ ಸ್ವತಂತ್ರಗೊಂಡ ಒಂದೆರಡು ದಿನಗಳಲ್ಲಿಯೇ ವಿದೇಶೀನೆಲದಲ್ಲಿ ಮೊಟ್ಟಮೊದಲಿಗೆ ಹಾರಿಸಿದ ಒಲಂಪಿಕ್ ಕ್ರೀಡಾಪಟು. ನಮ್ಮೊಂದಿಗೆ ಆತ್ಮೀಯ ಒಡನಾಟವಿದ್ದ ಅವರು ಒಮ್ಮೆ ಪ್ಯಾರಿಸ್‌ನಲ್ಲಿ ಭೇಟಿಯಾದಾಗ ಯಾವುದೋ ಮಾತಿನ ಪ್ರಸಂಗದಲ್ಲಿ ಹೇಳಿದ ನೆನಪು. ಇದು ನಿಜವಾಗಿ ನಡೆದ ಘಟನೆಯೋ ಅಥವಾ ಹಾಸ್ಯವೋ ತಿಳಿಯದು.

ಫ್ರಾನ್ಸ್ ದೇಶದಲ್ಲಿ ಒಬ್ಬ ಮಂತ್ರಿ ಇದ್ದನಂತೆ. ಅವನು ತುಂಬಾ ಭ್ರಷ್ಟ. ಯಾವುದೋ ಕೊಲೆಯ ಕೇಸಿನಲ್ಲಿ ನ್ಯಾಯಾಲಯದ ಮೊಕದ್ದಮೆಯನ್ನು ಎದುರಿಸುತ್ತಿದ್ದ. ನ್ಯಾಯಾಲಯವು ದೀರ್ಘ ಕಾಲ ವಿಚಾರಣೆ ನಡೆಸಿ ಆ ಮಂತ್ರಿ ಅಪರಾಧಿ ಎಂದು ತೀರ್ಮಾನಿಸಿ ಅವನಿಗೆ ಮರಣದಂಡನೆಯನ್ನು ವಿಧಿಸಿತು. ಆ ವೇಳೆಗೆ ಮಂತ್ರಿಯು ಈ ಲೋಕದಿಂದಲೇ ನಿರ್ಗಮಿಸಿದ್ದ. ಶಿಕ್ಷೆ ಅನುಭವಿಸಬೇಕಾಗಿದ್ದ ಮಂತ್ರಿಯು ಆಗಲೇ ಸತ್ತುಹೋಗಿದ್ದರಿಂದ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸಲು ಆಗುತ್ತಿಲ್ಲವೆಂದು ನ್ಯಾಯಾಲಯದ ಗಮನಕ್ಕೆ ತರಲಾಯಿತು. ಯಾವುದೇ ತೀರ್ಪನ್ನು ಕಾರ್ಯರೂಪಕ್ಕೆ ತರದೇ ಇದ್ದರೆ ಅಥವಾ ತೀರ್ಪಿಗನುಗುಣವಾಗಿ ಸಂಬಂಧಪಟ್ಟ ವ್ಯಕ್ತಿಗಳು ನಡೆದುಕೊಳ್ಳದೇ ಹೋದರೆ ಅದನ್ನು ‘ನ್ಯಾಯಾಂಗ ನಿಂದನೆ’ (Contempt of Court) ಎಂದು ಗಂಭೀರವಾಗಿ ಪರಿಗಣಿಸಿ ನ್ಯಾಯಾಲಯವು ಹೆಚ್ಚಿನ ಶಿಕ್ಷೆ ವಿಧಿಸುತ್ತದೆ. ಮೇಲ್ಕಂಡ ಪ್ರಕರಣದಲ್ಲಿ ಶಿಕ್ಷೆಯನ್ನು ಜಾರಿಗೊಳಿಸಲು ಅಪರಾಧಿಯೇ ಬದುಕಿಲ್ಲವಾದ್ದರಿಂದ ಜಾರಿಗೊಳಿಸುವುದಾದರೂ ಹೇಗೆ? ಅದಾವುದನ್ನೂ ಕೇಳದ ನ್ಯಾಯಾಲಯವು ಈ ಮುಂದಿನಂತೆ ಆದೇಶಿಸಿತು: “The dead body of the minister should be removed from the grave. He must be hanged as per law and then buried!” (ಸತ್ತುಹೋದ ಅಪರಾಧಿ ಮಂತ್ರಿಯ ಶವವನ್ನು ಗೋರಿಯಿಂದ ಹೊರತೆಗೆಯಬೇಕು. ನಿಯಮಾನುಸಾರ ಗಲ್ಲಿಗೇರಿಸಿ ನಂತರ ಸಮಾಧಿ ಮಾಡಬೇಕು!). ಈ ಕಾರಣದಿಂದಲೋ ಏನೋ “Law is an ass” (ಕಾನೂನು ಒಂದು ಕತ್ತೆ) ಎಂಬ ಮಾತು ಆಂಗ್ಲಭಾಷೆಯಲ್ಲಿ ಪ್ರಚಲಿತವಾಗಿದೆ. ಫ್ರಾನ್ಸ್ ದೇಶದಲ್ಲಿ ಮರಣದಂಡನೆ ವಿಧಿಸುವ ಶಿಕ್ಷೆ ಮಧ್ಯಕಾಲೀನದಿಂದಲೂ ಜಾರಿಯಲ್ಲಿದ್ದು 1981ರಿಂದ ಇತ್ತೀಚೆಗೆ ರದ್ದಾಗಿದೆ. ಮೇಲಿನ ಪ್ರಕರಣ ಒಂದು ರೀತಿಯಲ್ಲಿ ಕಾನೂನನ್ನು ಲೇವಡಿ ಮಾಡಿದಂತಿದೆ.

“Law is an ass” ಎಂಬ ನುಡಿಗಟ್ಟು ಸಾಹಿತ್ಯ ಕೃತಿಗಳಲ್ಲಿ ಮೊಟ್ಟಮೊದಲು ಬಳಕೆಗೆ ಬಂದದ್ದು ಚಾರ್ಲ್ಸ್ ಡಿಕನ್ಸ್‌ನ “Oliver Twist” ಎಂಬ ಪ್ರಸಿದ್ಧ ಕಾದಂಬರಿಯಲ್ಲಿ ಎಂದು ಹೇಳುತ್ತಾರೆ. ಗಂಡ-ಹೆಂಡತಿ ದೈಹಿಕವಾಗಿ ಬೇರೆ ಬೇರೆಯಾಗಿ ಕಂಡುಬಂದರೂ ಕಾನೂನಿನ ದೃಷ್ಟಿಯಲ್ಲಿ ಬೇರೆ ಬೇರೆ ವ್ಯಕ್ತಿಗಳಲ್ಲ. ಅವರಿಬ್ಬರೂ ಒಬ್ಬರೇ. ಮದುವೆಯ ನಂತರ ವಿವಾಹಿತ ಮಹಿಳೆ ತನ್ನ ಸ್ವಂತ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ ಅಥವಾ ಗಂಡನ ಅಸ್ತಿತ್ವದೊಂದಿಗೆ ಆಕೆಯ ಅಸ್ತಿತ್ವ ವಿಲೀನಗೊಳ್ಳುತ್ತದೆ. ಆಕೆ ಏನೇ ಮಾಡಿದರೂ ಗಂಡನ ನಿರ್ದೇಶನದ ಪ್ರಕಾರ ಮಾಡಿದಂತಾಗುತ್ತದೆ. ಮದುವೆಗೆ ಮುನ್ನ ಇಬ್ಬರೂ ಸ್ವತಂತ್ರ ವ್ಯಕ್ತಿಗಳಾಗಿ ಮಾಡಿಕೊಂಡ ಒಪ್ಪಂದಗಳು ಮದುವೆಯ ನಂತರ ಪ್ರಶ್ನಾರ್ಹವಾಗದೆ Void ಆಗಿ ತನ್ನೊಂದಿಗೆ ತಾನೇ ಮಾಡಿಕೊಂಡ ಒಪ್ಪಂದದಂತಾಗುತ್ತವೆ. ಆದಕಾರಣ ಕಾನೂನಿನ ದೃಷ್ಟಿಯಲ್ಲಿ ಹೆಂಡತಿ ಏನೇ ತಪ್ಪು ಮಾಡಿದರೂ ಅದಕ್ಕೆ ಗಂಡನೂ ಬಾಧ್ಯಸ್ಥನಾಗಬೇಕಾಗುತ್ತದೆಯೆಂಬ ಅಭಿಪ್ರಾಯ ಕಾದಂಬರಿಯ ಯಾವುದೋ ಒಂದು ಪ್ರಸಂಗದಲ್ಲಿ ಬರುತ್ತದೆ. ಅದಕ್ಕೆ ಗಂಡನಾದ Mr. Bumble ಎಂಬ ವ್ಯಕ್ತಿ ನೀಡಿದ ಉತ್ತರವೆಂದರೆ: “If the law supposes that (the wife acts under the direction of her husband) then the law is an ass – an idiot. If that’s the eye of the law, the law is a bachelor; and the worst I wish the law is that his eye may be opened by experience – by experience.”

ಕಾನೂನು ಕತ್ತೆಯೆಂದು ಆಪಾದಿಸುವ ಮೇಲಿನ ಪ್ರಕರಣ ಕಾನೂನುಪಂಡಿತರಿಗಲ್ಲದೆ ಸಾಮಾನ್ಯ ಓದುಗರಿಗೆ ಅರ್ಥವಾಗುವುದು ಕಷ್ಟ. ಸುಲಭವಾಗಿ ಅರ್ಥವಾಗಬಹುದಾದ ಪ್ರಕರಣವೆಂದರೆ ನಮ್ಮ ಸ್ವಂತ ಅನುಭವಕ್ಕೆ ಬಂದ ಈ ಮುಂದಿನ ಕೇಸು. A ಎಂಬ ವ್ಯಕ್ತಿ B ಎಂಬ ವ್ಯಕ್ತಿಯಿಂದ 2 ಲಕ್ಷ ರೂ. ಸಾಲ ಪಡೆದಿದ್ದ. ಸಾಲ ಕೊಟ್ಟ B ಸಾಲದ ಭದ್ರತೆಗಾಗಿ A ವ್ಯಕ್ತಿಯಿಂದ ಖಾಲಿ ಚೆಕ್ಕನ್ನು ಪಡೆದಿದ್ದ. ಸಾಲಗಾರನಾದ A ಒಂದೆರಡು ವರ್ಷಗಳ ನಂತರ B ಗೆ ತಾನು ಕೊಡಬೇಕಾಗಿದ್ದ ಸಾಲವನ್ನು ಅಸಲು ಬಡ್ಡಿಸಮೇತ ಪೂರ್ಣ ಪಾವತಿಸಿದ. ಆದರೆ ತಾನು ಸಾಲ

ತೆಗೆದುಕೊಳ್ಳವಾಗ B ಗೆ ಕೊಟ್ಟಿದ್ದ ಖಾಲಿ ಚೆಕ್ ವಾಪಾಸು ಪಡೆಯುವುದನ್ನು ಮಾತ್ರ ಮರೆತುಬಿಟ್ಟ. B ವಶದಲ್ಲಿದ್ದ ಖಾಲಿ ಚೆಕ್ ಹೇಗೋ C ಕೈಗೆ ಸೇರಿತು. B ಮತ್ತು C ಮಧ್ಯೆಯೂ ಹಣಕಾಸಿನ ವ್ಯವಹಾರವಿತ್ತು. B ತನಗೆ ಕೊಡಬೇಕಾದ ಹಣವನ್ನು ಕೊಡದ ಕಾರಣ C ಸಿಟ್ಟಿಗೆದ್ದು ತನ್ನ ಕೈಗೆ ಸಿಕ್ಕಿದ್ದ A ವ್ಯಕ್ತಿಯ ಖಾಲಿಚೆಕ್ಕನ್ನು ದುರುಪಯೋಗಪಡಿಸಿಕೊಂಡು ಅದರಲ್ಲಿ ತನ್ನ ಹೆಸರಿಗೆ 8 ಲಕ್ಷ ರೂ. ಗಳನ್ನು ಬರೆದುಕೊಂಡು A ವಿರುದ್ಧ ಕೋರ್ಟಿನಲ್ಲಿ ಚೆಕ್‌ಬೌನ್ಸ್ ಕೇಸನ್ನು ಹಾಕಿದ. ವಾಸ್ತವವಾಗಿ A ಮತ್ತು C ಮಧ್ಯೆ ನೇರವಾಗಿ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ. A ವಿರುದ್ಧ ದಾವೆ ಹೂಡಿ B ಯನ್ನು ಮಣಿಸಬೇಕೆಂಬುದು C ಉದ್ದೇಶವಾಗಿತ್ತು. A ನಿರಪರಾಧಿಯೆಂದು B ಮತ್ತು C ಇಬ್ಬರೂ ನಮ್ಮ "ಸದ್ಧರ್ಮನ್ಯಾಯಪೀಠ"ದ ಎದುರು ಒಪ್ಪಿದ್ದರು. ಆದರೆ ಅವರ ಮಧ್ಯೆ ಇರುವ ವ್ಯವಹಾರವನ್ನು ಬಗೆಹರಿಸಿ ರಾಜಿಮಾಡಿಸುವುದರೊಳಗೆ ಕೋರ್ಟಿನಲ್ಲಿ ವಿಚಾರಣೆ ನಡೆದು ನಿರಪರಾಧಿ A ಅನ್ಯಾಯವಾಗಿ ಒಂದಕ್ಕೆ ಎರಡುಪಟ್ಟು ಹಣ ತೆರುವಂತಾಯಿತು. ಅಷ್ಟೊಂದು ಹಣ ಕಟ್ಟಲು ಸಾಧ್ಯವಾಗದ A ಜೈಲಿಗೆ ಹೋಗುವ ಅಪಮಾನವನ್ನು ತಪ್ಪಿಸುವ ಸಲುವಾಗಿ 2,50,000/- ರೂ. ಗಳಿಗೆ C ರಾಜಿಯಾಗುವಂತೆ ಒಪ್ಪಿಸಲು ಹರಸಾಹಸ ಮಾಡಬೇಕಾಯಿತು.

ಮೇಲಿನ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಾನೂನು ಕತ್ತೆಯಾಗಿ ಕಂಡರೂ, ಕಾನೂನು ಕತ್ತೆಯೂ ಅಲ್ಲ ಕುದುರೆಯೂ ಅಲ್ಲ. ಕಾನೂನನ್ನು ಕತ್ತೆಯನ್ನಾಗಿ ದುರ್ಬಳಕೆ ಮಾಡಿಕೊಳ್ಳುವ ಕಡುಜಾಣರಿದ್ದಾರೆ. ಅಂಥವರು ಕೋರ್ಟುಗಳನ್ನು ತಮ್ಮ ವ್ಯವಹಾರದಲ್ಲಿ ಒಂದಕ್ಕೆ ಎರಡುಪಟ್ಟು ಸಾಲದ ಬಾಕಿ ವಸೂಲಿಮಾಡಿಕೊಡುವ ಏಜೆನ್ಸಿಗಳನ್ನಾಗಿ ಮಾಡಿಕೊಂಡಿರುವುದಂತೂ ಸ್ಪಷ್ಟ. ವೈಯಕ್ತಿಕ ಹಗೆತನವನ್ನು ಸಾಧಿಸಲು ದಾಖಲಾಗುತ್ತಿರುವ ಅಟ್ರಾಸಿಟಿ ಕೇಸುಗಳು, ಗಂಡ-ಹೆಂಡತಿಯರ ಮಧ್ಯೆ ವಿರಸವುಂಟಾದಾಗ ಹಾಕುವ ಸುಳ್ಳುವರದಕ್ಷಿಣೆ ಕೇಸುಗಳು ಯಾರಿಗೆ ಗೊತ್ತಿಲ್ಲ? ನ್ಯಾಯಾಲಯಗಳ ಕಟಕಟೆಯಲ್ಲಿ ನಿಂತು "ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನು ಬಿಟ್ಟು ಬೇರೆ ಏನನ್ನೂ ಹೇಳುವುದಿಲ್ಲ, ನಾನು ಹೇಳುವುದೆಲ್ಲಾ ಸತ್ಯ" ಎಂದು ಪ್ರಮಾಣ ಮಾಡುತ್ತಲೇ ಸುಳ್ಳನ್ನು ಬಿಟ್ಟು ಬೇರೆ ಏನನ್ನೂ ಹೇಳುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಿಂದಿನ ದಿನವೇ ನಾಳೆ ನ್ಯಾಯಾಲಯದಲ್ಲಿ ಹೇಗೆ ಸುಳ್ಳನ್ನು ಹೇಳಬೇಕೆಂಬ ತರಬೇತಿಯನ್ನು ತಮ್ಮ ಕಕ್ಷಿದಾರರಿಗೆ ಹೇಳಿಕೊಡುವವರೇ ವಕೀಲರು. ಹೀಗಾಗಿ "Lawyers are liars" ಎಂಬ ಮೂದಲಿಕೆಯ ಮಾತೂ ಇದೆ. "As far as possible, try to convince the judge or else confuse him" (ಸಾಧ್ಯವಾದಮಟ್ಟಿಗೆ ನ್ಯಾಯಾಧೀಶರ ಮನಸ್ಸಿಗೆ ನಾಟುವಂತೆ ವಾದ ಮಾಡಿರಿ ಇಲ್ಲವೇ ಅವರಿಗೆ ಅನುಮಾನ ಉಂಟಾಗುವಂತೆ ಮಾಡಿರಿ" ಎಂಬ 'ಹಿತನುಡಿ'ಯನ್ನು ವಕೀಲರಿಗೆ ಅವರ ವಿದ್ಯಾಗುರುಗಳು ಹೇಳಿಕೊಟ್ಟಿರುತ್ತಾರೆಂಬುದಂತೂ ಸತ್ಯ! ಎಷ್ಟೋ ಕೇಸುಗಳು benefit of doubt ಆಧಾರದ ಮೇಲೆ ವಜಾ ಆಗಿರುವ ಉದಾಹರಣೆಗಳು ಉಂಟು. ಸಾಕ್ಷಿಗಳು ಹೇಳುವ ಸುಳ್ಳಿನ ಕಂತೆಯಲ್ಲಿ ಸತ್ಯ ಯಾವುದು ಎಂದು ಪರಿಶೋಧಿಸುವ ಹರಸಾಹಸವನ್ನು ನ್ಯಾಯಾಧೀಶರು ಮಾಡಬೇಕಾಗುತ್ತದೆ. ದಾರಿಯಲ್ಲಿ ನಡೆದ ಒಂದು ದುರ್ಘಟನೆಯನ್ನು ನ್ಯಾಯಾಧೀಶರು ಕಣ್ಣಾರೆ ಕಂಡಿದ್ದರೂ ಪ್ರತ್ಯಕ್ಷದರ್ಶಿಗಳಾಗಿ ತೀರ್ಮಾನ ನೀಡಲು ಬರುವುದಿಲ್ಲ. ವಕೀಲರ ವಾದ-ವಿವಾದಗಳನ್ನು ಕೇಳಿ ಸಾಕ್ಷ್ಯಾಧಾರಗಳ ಮೇಲೆ ಕಾನೂನಿನನ್ವಯ ತೀರ್ಪನ್ನು ನೀಡಬೇಕಾಗುತ್ತದೆ. ಕಾನೂನು ಅವರ ಕಣ್ಣುಗಳನ್ನು ಕಟ್ಟಿಹಾಕುತ್ತದೆ. ಸುಳ್ಳು ಸಾಕ್ಷಿ ಹೇಳಿದವರಿಗೆಲ್ಲಾ ಜೈಲುಶಿಕ್ಷೆಯಾಗಿದ್ದರೆ ಅಂಥವರನ್ನು ಭರ್ತಿಮಾಡಲು ಈಗಿರುವ ಜೈಲುಗಳು ಸಾಕಾಗುತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಪಂಚಾಯಿತಿ ನಡೆದು ಸರಿಯಾದ ಸಾಕ್ಷ್ಯಾಧಾರಗಳು ಸಿಗದೆ ತೀರ್ಮಾನಿಸುವುದು ಕಷ್ಟವಾದಾಗ ಫಿರ್ಯಾದಿಯು ಎದುರಾಳಿಗೆ ಊರ ಮುಂದಿರುವ ಹನುಮಪ್ಪನ ಗುಡಿಯಲ್ಲಿ ಗಂಟೆ ಹೊಡೆದು ಹೇಳಲಿ ಎಂದು ಸವಾಲು ಹಾಕುತ್ತಿದ್ದನು. ಈಗ ಗುಡಿಯ ಗಂಟೆಯನ್ನೇ ಏಕೆ ಹನುಮಪ್ಪದೇವರ ಮೈಮೇಲಿರುವ ಬೆಳ್ಳಿಬಂಗಾರದ ಒಡವೆಗಳನ್ನೂ ಹೊಡೆಯುವವರು ಇದ್ದಾರೆ. ಮಠ-ಮಂದಿರ-ಮಸೀದಿ-ಚರ್ಚುಗಳ ಬಾಗಿಲುಗಳಿಗೆ ಬೀಗ ಹಾಕುವುದನ್ನು ಬಿಟ್ಟು ನೋಡಲಿ ಆಗ ಗೊತ್ತಾಗುತ್ತದೆ ಅಲ್ಲಿಗೆ ಹೋಗುವವರಲ್ಲಿ ಎಷ್ಟು ಜನ ಸದ್ಭಕ್ತರು, ಸತ್ಯಸಂಧರು ಈ ಪ್ರಪಂಚದಲ್ಲಿ ಇದ್ದಾರೆಂಬುದು!

**ಹಾಗದ ಕೆರಹ ಹೊರಗೆ ಕಳೆದು**
**ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವ ಭಕ್ತನಂತೆ**
**ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ ನೋಡಾ...**

ಎನ್ನುತ್ತಾರೆ ಬಸವಣ್ಣನವರು. ದೇವಾಲಯದ ಹೊರಗೆ ಚಪ್ಪಲಿಯನ್ನು ಬಿಟ್ಟು ಒಳಗೆ ಹೋಗಿ ದೇವರಿಗೆ ನಮಸ್ಕಾರ ಮಾಡುವ ಭಕ್ತನ ಮನಸ್ಸಿನಲ್ಲಿ ಮೂಡಿಬರುವ ಆಲೋಚನಾತರಂಗಗಳೆಂದರೆ ದೇವರ ಮೇಲಿನ ಧ್ಯಾನಕ್ಕಿಂತ ಹೊರಗೆ ಬಿಟ್ಟು ಬಂದ ತನ್ನ ಚಪ್ಪಲಿಗಳ ಮೇಲೆಯೇ ಹೆಚ್ಚಿನ 'ಧ್ಯಾನ'! ಈಗ ತಾನೇ ಮಾರುಕಟ್ಟೆಯಿಂದ ಕೊಂಡು ತಂದ ಹೊಚ್ಚ ಹೊಸ ಚಪ್ಪಲಿ ಯಾರಾದರೂ ಹೊಡೆದುಕೊಂಡು ಹೋದರೆ ಹೇಗೆ ಎಂಬ ಆತಂಕ ಅವನಿಗೆ! ಪಾಪ, ಚಪ್ಪಲಿಯನ್ನು ಮೆಟ್ಟಿಕೊಂಡೇ ಒಳಗೆ ಹೋಗಿ ಲಿಂಗಕ್ಕೆ ಅಡ್ಡಬೀಳಲು ಅವನೇನೂ ಬೇಡರ ಕಣ್ಣಪ್ಪ ಅಲ್ಲವಲ್ಲ! ಹಾಗೆಂದು ಹೊರಗೆ ಬೀದಿಯಲ್ಲಿಯೇ ನಿಂತು ಚಪ್ಪಲಿಯನ್ನು ಕಳಚಿ ಕಾವಲಿದ್ದುಕೊಂಡೇ ದೇವರಿಗೆ ಕೈಜೋಡಿಸಿ ನಮಸ್ಕಾರ ಮಾಡಿ ಹೋಗುವಷ್ಟು ನಾಸ್ತಿಕನೂ ಅವನಲ್ಲವಲ್ಲ!

ನ್ಯಾಯಾಲಯದಲ್ಲಿ ಕಾನೂನು ಕತ್ತೆಯಾಗದಂತೆ ನೋಡಿಕೊಂಡ ನ್ಯಾಯವಿಚಕ್ಷಣತೆಯನ್ನು ನೀವು ಷೇಕ್ಸ್‌ಪಿಯರ್‌ನ ಪ್ರಸಿದ್ಧ ನಾಟಕ Merchant of Venice ನಲ್ಲಿ ನೋಡಬಹುದು. ಇಟಲಿದೇಶದ ವೆನಿಸ್ ನಗರದಲ್ಲಿ ವರ್ತಕನಾಗಿದ್ದ ಆಂಟೋನಿಯೋ ತನ್ನ ಸ್ನೇಹಿತನಾದ ಬಸಾನಿಯೋಗೆ ತನ್ನ ಪ್ರತಿದ್ವಂದ್ವಿ ವರ್ತಕನಾದ ಶೈಲಾಕ್‌ನಿಂದ ಸಾಲ ಕೊಡಿಸಿ ಜಾಮೀನುದಾರನಾಗಿದ್ದ. ವಾಣಿಜ್ಯೋದ್ಯಮದಲ್ಲಿ ಆಂಟೋನಿಯೋ ಬಗ್ಗೆ ಒಳಗೊಳಗೇ ಈರ್ಷ್ಯಾಸೂಯೆ ಹೊಂದಿದ್ದ ಶೈಲಾಕ್ ನಿರ್ದಿಷ್ಟ ದಿನಾಂಕದೊಳಗೆ ಸಾಲ ಮರುಪಾವತಿ ಮಾಡದೇ ಹೋದರೆ ನಿನ್ನ ಶರೀರದ ಒಂದು ಪೌಂಡ್ ಮಾಂಸವನ್ನು ಕೊಡಬೇಕೆಂಬ ವಿಚಿತ್ರ ಷರತ್ತನ್ನು ಆಂಟೋನಿಯೋಗೆ ವಿಧಿಸಿದ್ದ. ಅದಕ್ಕೆ ಒಪ್ಪಿ ಆಂಟೋನಿಯೋ ಜಾಮೀನುಪತ್ರಕ್ಕೆ ಸಹಿಹಾಕಿದ್ದ. ದುರದೃಷ್ಟವಶಾತ್ ಅವನ ಹಡಗುಗಳು ಸಮುದ್ರದಲ್ಲಿ ಮುಳುಗಿ ವ್ಯಾಪಾರದಲ್ಲಿ ನಷ್ಟ

ಉಂಟಾಯಿತು. ಒಪ್ಪಂದದ ಪ್ರಕಾರ ಸಕಾಲದಲ್ಲಿ ಸಾಲ ಮರುಪಾವತಿಸದ ಕಾರಣ ಆಂಟೋನಿಯೋ ವಿರುದ್ಧ ಶೈಲಾಕ್ ಕೋರ್ಟಿನಲ್ಲಿ ದಾವೆ ಹೂಡಿದ. ಬಸಾನಿಯೋ ತನ್ನ ಸ್ನೇಹಿತನ ಮೇಲಿನ ಕರುಣೆಯಿಂದ ತನ್ನೆಲ್ಲ ಆಸ್ತಿಯನ್ನು ಮಾರಿ ತಾನು ಪಡೆದ ಸಾಲಕ್ಕಿಂತ ನಾಲ್ಕು ಪಟ್ಟು ಹಣವನ್ನು ಕೊಡುವುದಾಗಿ ನ್ಯಾಯಾಲಯದಲ್ಲಿ ಹೇಳಿದರೂ ಆತ ಒಪ್ಪಲಿಲ್ಲ. ಆಂಟೋನಿಯೋ ಮೇಲಿನ ಸೇಡಿನ ಮನೋಭಾವದಿಂದ ಅವನ ಶರೀರದ ಮಾಂಸಕ್ಕಾಗಿ 'ನರಭಕ್ಷಕ' ಶೈಲಾಕ್ ಹದ್ದಿನಂತೆ ಹಾರಾಡತೊಡಗಿದ. ಕಾನೂನು ಅವನ ಪರವಾಗಿತ್ತು. ಏನೂ ಮಾಡುವಂತಿರಲಿಲ್ಲ. ಚತುರಮತಿಯಳಾದ ಪೋರ್ಷಿಯೋ ಅವನ ಕೈಗೆ ಚಾಕು ಕೊಡುತ್ತಾಳೆ. ಒಪ್ಪಂದ ಪ್ರಕಾರ ನಿನಗೆ ಹಕ್ಕು ಇರುವುದು ಜಾಮೀನುದಾರನಾದ ಆಂಟೋನಿಯೋ ಶರೀರದಿಂದ ಒಂದು ಪೌಂಡ್ ಮಾಂಸ ತೆಗೆದುಕೊಳ್ಳಲು ಮಾತ್ರ, ಆದರೆ ಅವನ ರಕ್ತವನ್ನಲ್ಲ. ಆದಕಾರಣ ಹುಷಾರ್ ಅವನ ಶರೀರದಿಂದ ಒಂದು ತೊಟ್ಟು ರಕ್ತ ಬೀಳದಂತೆ ಮತ್ತು ಒಂದು ಕೂದಲೆಳೆಯಷ್ಟೂ ತೂಕದಲ್ಲಿ ವ್ಯತ್ಯಾಸವಾಗದಂತೆ ಖಚಿತವಾಗಿ ಒಂದೇ ಒಂದು ಪೌಂಡು ಮಾಂಸವನ್ನು ಮಾತ್ರ ತೆಗೆದುಕೋ, ತಪ್ಪಿದಲ್ಲಿ ನಿನ್ನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗುತ್ತದೆ ಎಂದು ಸವಾಲು ಹಾಕುತ್ತಾಳೆ:

> Prepare thee to cut off the flesh.
> Shed thou no blood, nor cut thou less nor more
> But just a pound of flesh!

ಕಾನೂನಿನ ಕೈಗಳು ಬಹಳ ಉದ್ದ, ಅಪರಾಧಿಯಾದವನು ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದು ಕಾನೂನುಪಂಡಿತರು ಹೇಳುತ್ತಾರೆ. ಆದರೆ 'ಬೀಸೋ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು' ಎಂಬ ನಾಣ್ಣುಡಿಯಂತೆ ಅದೇ ಕಾನೂನು ಅಡಿಯಲ್ಲಿ ಅಪರಾಧಿಯು ಸುಲಭವಾಗಿ ರಕ್ಷಣೆ ಪಡೆಯಲು ಅವಕಾಶಗಳು ಬೇಕಾದಷ್ಟಿವೆ. 'ನೂರು ಜನ ಅಪರಾಧಿಗಳಿಗೆ ಶಿಕ್ಷೆಯಾಗದಿದ್ದರೂ ಪರವಾಗಿಲ್ಲ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು' ಎಂಬ ನ್ಯಾಯಾಂಗದ ಧೋರಣೆಯಿಂದ ಅಪರಾಧಿಗಳ ಸಂಖ್ಯೆ ಹೆಚ್ಚುತ್ತಿದೆ. ಈ ಧೋರಣೆಯಲ್ಲಿ ಯಾವ ತಪ್ಪೂ ಇಲ್ಲ. ಆದರೆ 'Justice delayed is justice denied' ಎಂದು ಗೊತ್ತಿದ್ದರೂ ತ್ವರಿತವಾಗಿ ನ್ಯಾಯವಿತರಣೆ ಮಾಡಿ ಅಪರಾಧಿಗಳ ಸಂಖ್ಯೆಯನ್ನು ತಡೆಗಟ್ಟುವ ಕಾನೂನುವ್ಯವಸ್ಥೆ ಇಲ್ಲದಿರುವುದು ವಿಷಾದನೀಯ. ಶಿಕ್ಷೆಯ ಮೂಲ ಉದ್ದೇಶ ಅಪರಾಧಿಯ ಮನಃಪರಿವರ್ತನೆ (reformation) ಮತ್ತು ಅವನನ್ನೂ ಒಳಗೊಂಡಂತೆ ಬೇರೆಯವರು ಅಂತಹ ತಪ್ಪನ್ನು ಮಾಡದಿರಲೆಂಬ ಭಯದ ನಿರ್ಮಾಣ (deterrent). ಆದರೆ ನೂರು ಜನ ಅಪರಾಧಿಗಳಲ್ಲಿ 99 ಜನರು benefit of doubt ಆಧಾರದ ಮೇಲೆ ಬಿಡುಗಡೆಯಾಗಿ ಅಪರಾಧಿ ಎಂದು ಸಾಬೀತಾದ ಒಬ್ಬನಿಗೂ ಸಕಾಲದಲ್ಲಿ ಶಿಕ್ಷೆಯಾಗದೆ ಹೋದರೆ ಅಂತಹ ಕಾನೂನು ಕಾಗದದ ಹುಲಿ ಆಗುವುದಿಲ್ಲವೇ? ಆ ಕಾಗದದ ಹುಲಿ ನಿಜವಾದ ಹುಲಿಯಾಗಿ ಮೈಮೇಲೆ ಎರಗುವವರೆಗೂ ಪಾತಕಿಗಳು ಅಡೆತಡೆಯಿಲ್ಲದೆ ಅಟ್ಟಹಾಸದಿಂದ ಮೆರೆಯಲು ಅವಕಾಶ ಕಲ್ಪಿಸಿಕೊಟ್ಟಂತೆ ಆಗುವುದಿಲ್ಲವೇ? ಅಪರಾಧಿಗಳನ್ನು ಪರಿವರ್ತನೆ ಮಾಡದ, ಅಪರಾಧ ಮಾಡುವವರನ್ನು ಬೆಚ್ಚಿ ಬೀಳುವಂತೆ ಮಾಡದ ಶಿಕ್ಷೆ ಅಪರಾಧಿಗಳ ಮನಸ್ಸಿನಲ್ಲಿ ಅನಾದರಣೆ ಅಥವಾ ಅವಜ್ಞೆಯನ್ನು ಮೂಡಿಸುತ್ತದೆ. ಅದು ಬಂದಾಗ ನೋಡೋಣ ಏನಾದರೂ ಉಪಾಯ ಮಾಡೋಣ ಎಂದು ಕಾನೂನಿನಡಿಯಲ್ಲಿಯೇ ಆಶ್ರಯವನ್ನು ಪಡೆಯುವ ಅಪರಾಧಿಗಳ ಸಂಖ್ಯೆ ಹೆಚ್ಚುತ್ತಿದೆ.

'ಅಂಗೈ ಹುಣ್ಣಿಗೆ ಕನ್ನಡಿ ಏತಕ್ಕೆ' ಎಂಬಂತೆ ಒಂದು ಸಣ್ಣ ವಿಚಾರವನ್ನೂ ನಿಯಮಾನುಸಾರ ವಿಚಾರಣೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲು ನ್ಯಾಯಾಲಯಗಳಿಗೆ ಎಷ್ಟೋ ವರ್ಷಗಳು ಬೇಕಾಗುತ್ತದೆ. ಈ ದೇಶದ ಕಾನೂನಿನ ವ್ಯವಸ್ಥೆ ಅಷ್ಟು ದುರ್ಬಲವಾಗಿವೆ ಎಂಬುದನ್ನು ನೀವು ಮನಗಾಣಬಹುದಾಗಿದೆ. ಎಷ್ಟೋ ವೇಳೆ ಅಪರಾಧಿಗಿಂತ ನಿರಪರಾಧಿಯೇ ಕಾನೂನಿನ ಕಬಂಧಬಾಹುಗಳಿಂದ ನರಳಬೇಕಾದ ವಿಲಕ್ಷಣ ಪರಿಸ್ಥಿತಿ ಇದೆ ಎಂಬುದನ್ನು ಯಾರೂ ಅಲ್ಲಗಳೆಯಲಾಗದು.

4.3.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑